# ಒಣಎಲೆ ತ್ಯಾಜ್ಯವನ್ನು ಗೊಬ್ಬರವನ್ನಾಗಿ ಪರಿವರ್ತಿಸುವ ಬಗ್ಗೆ

ಎಲೆಗಳು ಹಾಗೂ ಕತ್ತರಿಸಿದ ಗಿಡಗಳನ್ನು ವಿಲೇವಾರಿ ಘಟಕಕ್ಕೆ ಸಾಗಿಸುವ ಬದಲು ಮೂಲದಲ್ಲೇ ಸಾವಯವ ಗೊಬ್ಬರವನ್ನಾಗಿ ಪರಿವರ್ತಿಸಿ, ಗಿಡಗಳಿಗೆ ಉಪಯೋಗಿಸುವುದರಿಂದ ಹೆಚ್ಚಿನ ಪ್ರಯೋಜನವಾಗುವುದು ಕಂಡು ಬಂದಿರುತ್ತದೆ.

ಒಣಎಲೆ ಮತ್ತು ಉದ್ಯಾನವನ ತ್ಯಾಜ್ಯದಿಂದ ಗೊಬ್ಬರ ತಯಾರಿಸಲು ಈ ಕೆಳಕಂಡ ಸಾಮಾಗ್ರಿಗಳ ಅವಶ್ಯಕತೆ ಇರುತ್ತದೆ.

- ಉದ್ಯಾನವನದ ಯಾವುದಾದರೂ ಒಂದು ಮೂಲೆಯಲ್ಲಿ 6*12 ಅಡಿಯ ಅಥವಾ ಯಾವುದೇ ಅಳತೆಯ ಜಾಗ
- 500 ರಿಂದ 1000 ಕೆ.ಜಿ ಹಸಿ ಮತ್ತು ಒಣ ಎಲೆ ಗಿಡಗಳು
- 12 ಇಂಚು ಉದ್ದದ 10 ರಿಂದ 15 ಸಾಲ್ವೆ ಮರದ ಕಂಬಗಳು
- 100 ಲೀಟರ್ ಸಗಣಿ
- ಸಗಣಿ ಮತ್ತು ನೀರನ್ನು ಮಿಶ್ರಣ ಮಾಡಲು ಒಂದು ಡ್ರಮ್
- ತೆಂಗಿನ ಗರಿಗಳು
- ಗೋಣಿ ಚೀಲಗಳು

ಮಾಡುವ ವಿಧಾನ

- ಇಟ್ಟಿಗೆ ಅಥವಾ ಕಲ್ಲುಗಳ ಮೇಲೆ ಸಾಲ್ವೆ ಮರದ ಕಂಬಗಳಿಂದ ನೆಲದ ಮೇಲ್ಭಾಗದಲ್ಲಿ ಚಿತ್ರದಲ್ಲಿ ತೋರಿಸಿರುವ ಹಾಗೆ ಒಂದು ಪ್ಲಾಟ್ ಫಾರಂ ನಿರ್ಮಿಸಿ, ಇದರಿಂದ ಹೆಚ್ಚಿನ ನೀರಿನ ಅಂಶವು ಕೆಳಗಡೆ ಸೋರುತ್ತದೆ ಹಾಗೂ ಗಾಳಿಯೂ ಎಲೆಯ ಗುಡ್ಡೆಯ ಮೇಲೆ ಸಂಚರಿಸಲು ಅನುಕೂಲವಾಗುತ್ತದೆ.
- ಈ ಪ್ಲಾಟ್ ಫಾರಂ ಮೇಲೆ ತೆಂಗಿನ ಗರಿಯನ್ನು ಅಥವಾ ದೊಡ್ಡ ಎಲೆಗಳನ್ನು ಇರಿಸುವುದು.
- ಎಲೆಗಳು ಮತ್ತು ಕತ್ತರಿಸಿದ ಗಿಡಗಳನ್ನು ಪ್ಲಾಸ್ಟಿಕ್ ಮತ್ತು ಪೇಪರ್‌ಗಳಿಂದ ಬೇರ್ಪಡಿಸಿ ಅದನ್ನು ತುಳಿದು ಪುಡಿಮಾಡುವುದು.
- ಎರಡು ಬೊಗಸೆಯ ಸಗಣಿಗೆ ಹತ್ತು ಲೀಟರ್ ನೀರನ್ನು ಮಿಶ್ರಣ ಮಾಡಿ ಸಗಣಿ ನೀರನ್ನು ತಯಾರಿಸಿಕೊಳ್ಳುವುದು, ಈ ಮಿಶ್ರಣಕ್ಕೆ ಪುಡಿಮಾಡಿರುವ ಎಲೆಗಳನ್ನು ಹದ್ದಿ ಹಿಂಡಿ ತೆಂಗಿನ ಗರಿಯ ಮೇಲೆ ಪದರದ ಮೇಲೆ ಪದರದಂತೆ ಹಾಕುತ್ತಾ 5 ಅಡಿ ಎತ್ತರದವರೆಗೂ ಗುಡ್ಡೆ ಮಾಡುವುದು.
- ಈ ಗುಡ್ಡೆಯನ್ನು ಗೋಣಿ ಚೀಲದಿಂದ ಸಂಪೂರ್ಣವಾಗಿ ಮುಚ್ಚಿ ಸಗಣಿಯ ನೀರನ್ನು ಸಿಂಪಡಿಸುವುದು.
- ಗುಡ್ಡೆಯು ತೇವಾಂಶವನ್ನು ಕಾದಿರಿಸುವುದಕ್ಕಾಗಿ ಪ್ರತಿ ನಿತ್ಯ ಒಂದರಿಂದ ಎರಡು ಬಾರಿ ನೀರನ್ನು ಸಿಂಪಡಿಸುವುದರಿಂದ, ಬ್ಯಾಕ್ಟೀರಿಯಾ ಸಹಾಯದಿಂದ ವೇಗವಾಗಿ ಗೊಬ್ಬರವಾಗಿ ಪರಿವರ್ತನೆಗೊಳ್ಳುತ್ತದೆ.
- ಗುಡ್ಡೆಯನ್ನು 45 ದಿನಗಳ ಕಾಲ ಹಾಗೇ ಬಿಡುವುದು, ತದ ನಂತರ ಎಲೆಗಳು ಗೊಬ್ಬರವಾಗಿ ಪರಿವರ್ತನೆಗೊಂಡಿರುತ್ತದೆ.
- ಇದನ್ನು ತೋಟಗಾರಿಕೆ ಮತ್ತು ಉದ್ಯಾನವನದ ಸಸಿಗಳಿಗೆ ಉಪಯೋಗಿಸಬಹುದಾಗಿರುತ್ತದೆ.

# Leaf Litter Composting



Collect dry leaves, removing paper and plastic



Crush the leaves by stamping to hasten composting



Make a platform, and place it a foot above the ground



Cover the platform with dry coconut gari



or plaited gari



Make some dilute cowdung slurry



Soak leaves in cowdung, drain and spread evenly on platform



Pile it 4 ft high



Cover it with jute cloth



Water it daily to maintain moisture for composting



Leave it for 45 days



Height of the pile has reduced to half the size



The leaf mulch has become powdery



Healthy earthworms live in the compost



Rich leaf mulch

Contact - 98450 11757 / 93412 50158